**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 486/2025**

**ಸಿ.ಡಬ್ಲ್ಯೂಃ 3, ಪಿ.ಡಬ್ಲ್ಯೂಃ 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಶೇಷಗಿರಿ |
| ತಂದೆಯ ಹೆಸರು | : | ಮಾಸ್ತಿ ಗೊಂಡ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸ್ತವ್ಯ | : | ಕ್ರಿತ್ರೆ, ಭಟ್ಕಳ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 04/12/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನನಗೆ ದಿನಾಂಕ ನೆನಪಿಲ್ಲ. ದೇವಿನಗರದ ಹತ್ತಿರ ಚಹ ಕುಡಿಯುವಾಗ ಪೊಲೀಸರು ಒಂದು ದಾಖಲೆಗೆ ಸಹಿ ಪಡೆದು ಪೊಟೋ ತೆಗೆದಿರುತ್ತಾರೆ ಹಾಗೂ ಪಂಚನಾಮೆ ಮಾಡಿರುತ್ತಾರೆ. ಆದರೆ ಸದರಿ ಪಂಚನಾಮೆ ಯಾಕೆ ಮಾಡಿದ್ದರು ಹಾಗೂ ಯಾಕೆ ನನ್ನ ಸಹಿ ಪಡೆದಿದ್ದರೆಂದು ನನಗೆ ಮಾಹಿತಿ ಇಲ್ಲಾ.

ಸಾಕ್ಷಿಯು ನಿಪಿ-4 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಸಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ಪೊಟೋ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಆದರೆ ಇದರಲ್ಲಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು : ಎಪಿಪಿಯವರಿಂದ,**

ದಿಃ 04.11.2024 ರಂದು ಚಾಸಾ 11 ರವರು ಗಲಾಟೆ ಪ್ರಕರಣದಲ್ಲಿ ನನಗೆ ಹಾಗೂ ಚಾಸಾ 2 ರವರಿಗೆ ಪಂಚರಾಗಿ ಪಂಚನಾಮೆಗೆ ನೋಟೀಸು ನೀಡಿ ಕರೆದಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣದ ದೂರುದಾರರಾದ ಚಾಸಾ 1 ರವರು ಗುನ್ಹಾ ಸ್ಥಳವನ್ನು ನಮ್ಮ ಸಮಕ್ಷಮ ತೋರಿಸಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣ ಆರೋಪಿತರು ಚಾಸಾ 1 ರವರಿಗೆ ಅವಾಚ್ಯವಾಗಿ ಬೈದು ಹಲ್ಲೆ ಮಾಡಿದ್ದರ ಕುರಿತಾಗಿ ಮಾಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸದರಿ ದಿನದಂದು ಪಂಚನಾಮೆಗೆ ಹಾಜರಿದ್ದು ಸಹಿ ಮಾಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ.,ಭಟ್ಕಳ.